

## ‘ಓದು ಬಿಟ್ಟು ಬರುವವರು ಕಡಿಮೆ’

‘ವಿದ್ಯಾಭ್ಯಾಸ ಬಿಟ್ಟು ಫುಡ್ ಡೆಲಿವರಿಯಂತಹ ಕೆಲಸಗಳಿಗೆ ಯುವಕರು ಬರುತ್ತಿದ್ದಾರೆ ಎಂಬುದು ಅಷ್ಟು ಸರಿಯಲ್ಲ. ಬೇರೇನೂ ಆಯ್ಕೆಗಳಿಲ್ಲ ಎಂದಾಗ ಮಾತ್ರ ಈ ಕೆಲಸಗಳತ್ತ ನೋಡುತ್ತಾರೆ’ ಎಂಬುದು ಫುಡ್ ಡೆಲಿವರಿ ಪಾರ್ಟ್ನರ್ಸ್ ಒಕ್ಕೂಟದ ಕಾರ್ಯದರ್ಶಿ ಕೃಷ್ಣ ಅವರ ಅಭಿಪ್ರಾಯ.

‘ದೊಡ್ಡ ಕ್ರೀಡಾಪಟುವಾಗಬೇಕು, ಚಿತ್ರರಂಗದಲ್ಲಿ ಏನೋ ಸಾಧನೆ ಮಾಡಬೇಕು ಎಂದುಕೊಂಡು ಬೆಂಗಳೂರಿಗೆ ಬರುವವರು ಇರುತ್ತಾರೆ. ಅಂಥವರಿಗೆ ತಕ್ಷಣಕ್ಕೆ ಗುರಿ ಮುಟ್ಟಲು ಸಾಧ್ಯವಾಗದೇ ಇದ್ದಾಗ, ದೈನಂದಿನ ಖರ್ಚು ಸರಿದೂಗಿಸಿಕೊಳ್ಳಲು ಈ ಕೆಲಸಗಳಿಗೆ ಬರುತ್ತಾರೆ’ ಎಂದರು.

‘ಸರ್ಕಾರವು ಉನ್ನತ ಶಿಕ್ಷಣಕ್ಕೆ ಸರಿಯಾಗಿ ವಿದ್ಯಾರ್ಥಿ ವೇತನ ನೀಡುತ್ತಿಲ್ಲ. ಸುಮಾರು 6 ತಿಂಗಳುಗಳಿಂದ ಸ್ಕಾಲರ್‌ಶಿಪ್ ಸಿಕ್ಕಿಲ್ಲ. ವಿದ್ಯಾರ್ಥಿವೇತನ ನೀಡಬೇಕು ಎಂದು ಆಗ್ರಹಿಸಿ ಯುವಕರು ಹೋರಾಟವನ್ನೆಲ್ಲ ಮಾಡಿದರು. ಆದರೂ ಆಗುತ್ತಿಲ್ಲ. ಮನೆಯಲ್ಲಿ ಅನುಕೂಲ ಇದ್ದರೆ ಯಾರೂ ಫುಡ್ ಡೆಲಿವರಿಯಂತಹ ನಿತ್ಯ ಬಿಸಿಲಿನಲ್ಲಿ ಓಡಾಡುವ ಕೆಲಸಕ್ಕೆ ಬರುವುದಿಲ್ಲ. ಅನಿವಾರ್ಯ ಇದ್ದವರು ಮಾತ್ರ ಬರುತ್ತಿದ್ದಾರೆ. ಸರ್ಕಾರ ಈಗ, ಗಿಗ್ ಕೆಲಸಗಾರರ ಅನುಕೂಲಕ್ಕಾಗಿ ಹಲವು ಕಾನೂನು ತರುತ್ತಿದೆ. ಅವು ಸಮರ್ಪಕವಾಗಿ ಅನುಷ್ಠಾನಗೊಂಡರೆ ಈ ವಲಯದ ಕೆಲಸಗಾರರಿಗೆ ನೆರವಾಗಬಹುದು. ಭದ್ರತೆ ದೊರೆತರೆ, ಈ ಕೆಲಸಗಳನ್ನು ಮಾಡಿಕೊಂಡೂ ಉನ್ನತ ಶಿಕ್ಷಣ ಪಡೆಯುವವರ ಸಂಖ್ಯೆಯೂ ಹೆಚ್ಚಬಹುದು’ ಎಂದು ಕೃಷ್ಣ ಭರವಸೆ ವ್ಯಕ್ತಪಡಿಸಿದರು.



ಶಾಲೆ ತೊರೆಯುವ ಮಕ್ಕಳ ಪೈಕಿ ಬಾಲಕರ ಪ್ರಮಾಣ ಶೇ 21.9ರಷ್ಟಿದ್ದರೆ, ಬಾಲಕಿಯರ ಪ್ರಮಾಣ ಶೇ 14.6ರಷ್ಟಿದೆ.

ಇನ್ನು, ಪದವಿ ನಂತರ ವಿದ್ಯಾಭ್ಯಾಸ ಮುಂದುವರಿಸುವವರ ಪ್ರಮಾಣವೂ ರಾಜ್ಯದಲ್ಲಿ ಕಡಿಮೆ ಇದೆ. ಉನ್ನತ ಶಿಕ್ಷಣದಲ್ಲಿ ಕರ್ನಾಟಕದ ಒಟ್ಟು ನೋಂದಣಿ ಅನುಪಾತ 2021–22ರಲ್ಲಿ ಕೇವಲ 36.2ರಷ್ಟಿದೆ. ಕೇಂದ್ರ ಸರ್ಕಾರವು, ಅಖಿಲ ಭಾರತ ಮಟ್ಟದಲ್ಲಿ ನಡೆಸಿದ ಉನ್ನತ ಶಿಕ್ಷಣ ಸಮೀಕ್ಷೆಯು (AISHE) ಈ ದತ್ತಾಂಶವನ್ನು ಮುಂದಿಟ್ಟಿದೆ. 2020–21ನೇ ಸಾಲಿಗೆ ಹೋಲಿಸಿದರೆ, ಈ ಪ್ರಮಾಣದಲ್ಲಿ ಶೇ 0.2ರಷ್ಟು ಹೆಚ್ಚಾಗಿದ್ದರೂ, ಒಟ್ಟಾರೆ ಉನ್ನತ ಶಿಕ್ಷಣಕ್ಕೆ ಸೇರುವವರ ಪ್ರಮಾಣ ರಾಜ್ಯದಲ್ಲಿ ಅಷ್ಟೊಂದು ತೃಪ್ತಿದಾಯಕವಾಗಿಲ್ಲ.

### ಯುವಸಮೂಹದ ಮಹತ್ವಾಕಾಂಕ್ಷೆ ಕಡಿಮೆಯಾಗುತ್ತಿದೆಯೇ?

ಉನ್ನತ ಶಿಕ್ಷಣದ ಕಡೆಗೆ ಹೆಚ್ಚು ಒಲವು ತೋರದ ಮಕ್ಕಳನ್ನು ಕಂಡಾಗ, ಅವರಲ್ಲಿ ಮಹತ್ವಾಕಾಂಕ್ಷೆ ಕಡಿಮೆಯಾಗುತ್ತಿದೆಯೇ ಎಂಬ ಅನುಮಾನವೂ ಮೂಡುತ್ತದೆ. ‘ಲೈಫ್‌ನಲ್ಲಿ ಬೇಗ ಸೆಟಲ್ ಆಗಬೇಕು’ ಎಂಬ ಒತ್ತಡವೋ ಅಥವಾ ಸರ್ಕಾರಿ–ಖಾಸಗಿ ಯಾವುದೋ ಕೆಲಸ ಸಿಕ್ಕ ತಕ್ಷಣವೇ ‘ಇಷ್ಟು ಸಾಕು’ ಎಂಬ ಮನೋಭಾವ ಅನೇಕರಲ್ಲಿದೆ. ಜೊತೆಗೆ, ಈಗ ತಂತ್ರಜ್ಞಾನ ಬಳಕೆ ಮತ್ತು ಮನರಂಜನೆಗೆ ಹೆಚ್ಚು ಸಮಯ ಮೀಸಲಿಡುತ್ತಿರುವುದರಿಂದಲೂ ಶ್ರಮ, ಪರಿಶ್ರಮ, ದೀರ್ಘಾವಧಿಯ ಕನಸುಗಳಿಗೆ ತಕ್ಕ ಮಟ್ಟಿನ ಗಮನ ನೀಡುತ್ತಿಲ್ಲ ಎಂಬ ಅಭಿಪ್ರಾಯವೂ ಇದೆ.

## ‘ಬ್ಯಾಂಕ್ ಸಾಲ, ಸ್ಕಾಲರ್‌ಶಿಪ್‌ನಂತಹ ಯೋಜನೆ ಸದುಪಯೋಗಪಡಿಸಿಕೊಳ್ಳಿ’



‘ಬಿಇ ಅಥವಾ ಇನ್ನಾವುದೇ ಪದವಿ ಮಾಡಿದ್ದರೂ, ಓದು ಮುಂದುವರಿಸುವುದಕ್ಕೆ ಬ್ಯಾಂಕ್ ಸಾಲ, ಸ್ಕಾಲರ್‌ಷಿಪ್ ಮುಂತಾದ ಯೋಜನೆಗಳಿವೆ. ಅದನ್ನು ಸದುಪಯೋಗಮಾಡಿಕೊಳ್ಳಬೇಕು’ ಎಂದು ಸಲಹೆ ನೀಡುತ್ತಾರೆ ಬೆಂಗಳೂರಿನ ಎಸಿಎಸ್ ಎಂಜಿನಿಯರಿಂಗ್ ಕಾಲೇಜು ಪ್ರಾಚಾರ್ಯ ಆನಂದತೀರ್ಥ ಬಿ. ಗುಡಿ.

‘ಕಡಿಮೆ ಶುಲ್ಕದಲ್ಲಿಯೇ ಸಾಕಷ್ಟು ಸ್ನಾತಕೋತ್ತರ ಪದವಿ ಕೋರ್ಸ್‌ಗಳಿವೆ. ಬಿಇ ಮುಗಿಸಿ, ಕಾಲೇಜಿನಲ್ಲಿ ಇನ್‌ಸ್ಟ್ರಕ್ಟರ್ ಅಥವಾ ಟ್ಯೂಟರ್ ಆಗಿ ಕೂಡ ಸೇರಿಕೊಳ್ಳಬಹುದು. ಎಂಎಸ್‌ಸಿ ಬೈ ಎಂಜಿನಿಯರಿಂಗ್ ಕೂಡ ಮಾಡಬಹುದು. ಮೊದಲು, ಎಂಜಿನಿಯರ್ ಫಸ್ಟ್‌ಕ್ಲಾಸ್ ಬಂದರೆ ಲೆಕ್ಚರರ್ ಎಂದು ತೆಗೆದುಕೊಳ್ಳುತ್ತಿದ್ದರು. ಈಗ ಬಿಇ ಫಸ್ಟ್‌ಕ್ಲಾಸ್ ಬಂದರೆ ಲೆಕ್ಚರರ್ ಎಂದು ತೆಗೆದುಕೊಳ್ಳುವುದಿಲ್ಲ. ಈಗ ಕನಿಷ್ಠ ಎಂ.ಟೆಕ್ ಮಾಡಿರಬೇಕು. ಹಾಗಾಗಿ, ಕಂಪ್ಯೂಟರ್ ಸೈನ್ಸ್‌ನಲ್ಲಿ ಎಂಜಿನಿಯರಿಂಗ್ ಮಾಡಿದ್ದರೆ ಕಾಲೇಜುಗಳಲ್ಲಿ ಪ್ರೋಗ್ರಾಮರ್ ಎಂದು, ಬೇರೆ ವಿಷಯಗಳಲ್ಲಿ ಎಂಜಿನಿಯರಿಂಗ್ ಮಾಡಿದ್ದರೆ ಟ್ಯೂಟರ್ ಎಂದು ತೆಗೆದುಕೊಳ್ಳುವ ಅವಕಾಶವಿದೆ. ನಮ್ಮ ಕಾಲೇಜಿನಲ್ಲಿಯೂ ಟ್ಯೂಟರ್‌ಗಳನ್ನು ತೆಗೆದುಕೊಳ್ಳುತ್ತಿದ್ದೇವೆ’ ಎಂದು ಅವರು ಹೇಳಿದರು.